**ದೇಶೀಯ/ ಎನ್‌ಆರ್‌ಇ/ ಎಫ್‌ಸಿಎನ್‌ಆರ್ (ಬಿ) ಸಾವಧಿ ಠೇವಣಿಗಳ ಮೇಲೆ ನೀಡುವ ಸಾಲಗಳ ಮೇಲೆ ಬಡ್ಡಿ ದರಗಳು**

**ಭಾರತೀಯ ರಿಸರ್ವ್ ಬ್ಯಾಂಕು**
**ಕೇಂದ್ರ ಕಚೇರಿ**
**ಬ್ಯಾಂಕಿಂಗ್ ಕಾರ್ಯಾಚರಣೆಗಳ ಇಲಾಖೆ ಮತ್ತು ಅಭಿವೃದ್ಧಿ ಕೇಂದ್ರ-೧**
**ವಿಶ್ವ ವ್ಯಾಪಾರ ಕೇಂದ್ರ,**
**ಕಫೆ ಪರೇಡ್, ಕೊಲಾಬಾ**
**ಮುಂಬೈ-೪೦೦೦೦೫**

ಡಿಬಿಒಡಿ.ಡಿಐಆರ್.ಬಿಸಿ. ೧೫೩/೧೩.೦೩.೦೦/೯೯-೨೦೦೦ ಮಾರ್ಚ್ ೨೩, ೨೦೦೦

ಎಲ್ಲ ಅನುಸೂಚಿತ ವಾಣಿಜ್ಯ ಬ್ಯಾಂಕುಗಳಿಗೆ,
(ಆರ್‌ಆರ್‌ಬಿ ಗಳನ್ನು ಹೊರತುಪಡಿಸಿ)

ಮಾನ್ಯರೇ,

**ದೇಶೀಯ/ ಎನ್‌ಆರ್‌ಇ/ ಎಫ್‌ಸಿಎನ್‌ಆರ್ (ಬಿ) ಸಾವಧಿ ಠೇವಣಿಗಳ ಮೇಲೆ ನೀಡುವ ಸಾಲಗಳ ಮೇಲೆ ಬಡ್ಡಿ ದರಗಳು**

ನಮ್ಮ ಮಾರ್ಗದರ್ಶಕ ಸೂಚನೆಗಳಾದ ಡಿಬಿಒಡಿ.ಸಂಖ್ಯೆ.ಡಿಐಆರ್.ಬಿಸಿ.೧೦೭/೧೩.೦೧.೦೪/೯೯ ಮತ್ತು ೧೦೮/೧೩.೦೧.೦೯/೯೯, ದಿನಾಂಕ ೨೯ ಅಕ್ಟೋಬರ್ ೧೯೯೯ ಇವುಗಳನ್ನು ದಯವಿಟ್ಟು ನೋಡಿ. ಅವುಗಳ ಪ್ರಕಾರ ಠೇವಣಿದಾರರುಗಳಿಗೆ ಅವರ ಸ್ವಂತ ದೇಶೀಯ/ ಎನ್‌ಆರ್‌ಇ/ ಎಫ್‌ಸಿಎನ್‌ಆರ್ (ಬಿ) ಸಾವಧಿ ಠೇವಣಿಗಳ ಮೇಲೆ ಮಂಜೂರು ಮಾಡಿದ ಸಾಲಗಳ ಮೇಲೆ ತಮ್ಮ ಪ್ರಧಾನ ಬಡ್ಡಿ ದರವನ್ನು (ಪಿಎಲ್‌ಆರ್) ಗಣನೆಗೆ ತೆಗೆದುಕೊಳ್ಳದೆ ಬಡ್ಡಿ ದರಗಳನ್ನು ವಿಧಿಸಲು ಬ್ಯಾಂಕುಗಳಿಗೆ ಸ್ವಾತಂತ್ರ್ಯ ನೀಡಲಾಗಿದೆ. ಆದರೆ, ಕೆಲವು ಪ್ರಕರಣಗಳಲ್ಲಿ, ವಿಶೇಷವಾಗಿ ಮೂರನೆಯ ಪಕ್ಷಕಾರ ಠೇವಣಿಗಳ ಮೇಲೆ ನೀಡಿದ ೨ ಲಕ್ಷ ರೂಪಾಯಿಗಳವರೆಗಿನ ಸಾಲಗಳ ವಿಷಯದಲ್ಲಿ ವಿಧಿಸತಕ್ಕಂತಹ ಬಡ್ಡಿಯ ದರವು ಠೇವಣಿದಾರನ ಸ್ವಂತ ಠೇವಣಿಗಳ ಮೇಲೆ ನೀಡುವ ಸಾಲಗಳಿಗೆ ವಿಧಿಸುವ ದರಕ್ಕಿಂತ ಕಡಿಮೆಯಾಗುತ್ತದೆ ಎಂಬುದನ್ನು ಗಮನಿಸಲಾಗಿದೆ. ಆದರಂತೆ, ಈ ವಿಷಯವನ್ನು ಪುನರ್ ಪರಿಶೀಲಿಸಿ, ಠೇವಣಿದಾರರಿಗೆ ಅವರ ಸ್ವಂತ ಠೇವಣಿಗಳ ಮೇಲೆ ನೀಡುವ ಸಾಲಗಳ ವಿಷಯದಲ್ಲಿ ಇತ್ತೀಚೆಗೆ ಮಾಡಿದಂತೆ, ಮೂರನೆಯ ಪಕ್ಷಕಾರ ಠೇವಣಿಗಳ ಮೇಲೆ ನೀಡುವ ೨ ಲಕ್ಷ ರೂಪಾಯಿವರೆಗಿನ ಸಾಲಗಳ ವಿಷಯದಲ್ಲಿ ಸೂಕ್ತ ದರಗಳಲ್ಲಿ ಬಡ್ಡಿ ವಿಧಿಸುವ ವಿವೇಚನಾಧಿಕಾರವನ್ನು ಬ್ಯಾಂಕುಗಳಿಗೆ ನೀಡಬಹುದೆಂದು ನಿರ್ಧರಿಸಲಾಗಿದೆ. ತಮ್ಮ ಪ್ರಧಾನ ಬಡ್ಡಿ ದರವನ್ನು (ಪಿಎಲ್‌ಆರ್) ಗಣನೆಗೆ ತೆಗೆದುಕೊಳ್ಳದೆ ೨ ಲಕ್ಷ ರೂಪಾಯಿಗಳವರೆಗಿನ ಅಂಥ ಸಾಲಗಳ ಮೇಲೆ ಬಡ್ಡಿ ವಿಧಿಸುವ ಸ್ವಾತಂತ್ರ್ಯ ಈಗ ಅವುಗಳಿಗಿದೆ. ಆದರೆ, ಮೂರನೆಯ ಪಕ್ಷಕಾರ ಠೇವಣಿಗಳ ಮೇಲಿನ ೨ ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟ ಸಾಲಗಳ ಮೇಲಿನ ಬಡ್ಡಿಯ ದರವನ್ನು ಕಾಲಕಾಲಕ್ಕೆ ಹೊರಡಿಸಿದ ಬಡ್ಡಿ ದರ ಕುರಿತ ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗದರ್ಶಕ ಸೂಚನೆಗಳ ಅನ್ವಯ ನಿರ್ಧರಿಸುವುದು ಮುಂದುವರೆಯುತ್ತದೆ.

೨. ಅದರಂತೆ, ತಿದ್ದುಪಡಿ ಮಾಡುವ ಮಾರ್ಗದರ್ಶಕ ಸೂಚನೆಗಳಾದ ಡಿಬಿಒಡಿ. ಸಂಖ್ಯೆ. ಡಿಐಆರ್.ಬಿಸಿ ೧೫೧ ಮತ್ತು ೧೫೨/೧೩-೦೩-೦೦/೯೯-೨೦೦೦, ದಿನಾಂಕ ಮಾರ್ಚ್ ೨೧, ೨೦೦೦ ನ್ನು ಲಗತ್ತಿಸಿದೆ.

೩. ಅದರ ಪರಿಣಾಮವಾಗಿ ಮಾಡಬೇಕಾದ ಈ ಮುಂದಿನ ತಿದ್ದುಪಡಿಗಳನ್ನು ಸೂಚನೆಗಳ ಕೈಪಿಡಿ ಸಂಪುಟ-ಖ, ಭಾಗ -ಖ ರಲ್ಲಿ ದಯವಿಟ್ಟು ಮಾಡತಕ್ಕದ್ದು.

(i) ಪ್ಯಾರಾ ೯.೧೫.೧ ರ ಹಾಲಿ ಇರುವ ಖಂಡ (i) ರ ಉಪಖಂಡ (ಬಿ) ಯನ್ನು ಲಗತ್ತಿಸಿರುವ ಸ್ಲಿಪ್ ೧೦ರ ಪ್ರಕಾರ ತಿದ್ದುಪಡಿ ಮಾಡತಕ್ಕದ್ದು.

(ii) ಪ್ಯಾರಾ ೯.೧೫.೨ ರ ಹಾಲಿ ಇರುವ (i) (ಬಿ) ಖಂಡದ (ಬಿ) ಉಪಖಂಡವನ್ನು ಲಗತ್ತಿಸಿರುವ ಸ್ಲಿಪ್ ೧೧ರ ಪ್ರಕಾರ ತಿದ್ದುಪಡಿ ಮಾಡತಕ್ಕದ್ದು.

(೨) ಪ್ಯಾರಾ ೯.೧೫.೨ ರ ಹಾಲಿ ಇರುವ ಖಂಡ (೨) (ಬಿ) ಖಂಡದ (ಬಿ) ಉಪಖಂಡವನ್ನು ಲಗತ್ತಿಸಿರುವ ಸ್ಲಿಪ್ ೧೨ರ ಪ್ರಕಾರ ತಿದ್ದುಪಡಿ ಮಾಡತಕ್ಕದ್ದು.

೪. ದಯವಿಟ್ಟು ಸ್ವೀಕೃತಿ ನೀಡಿ.

ತಮ್ಮ ವಿಶ್ವಾಸಿ,

(ಪಿ.ವಿ. ಸುಬ್ಬರಾವ್)
ಮುಖ್ಯ ಪ್ರಧಾನ ವ್ಯವಸ್ಥಾಪಕರು

ಲಗತ್ತುಗಳು: ಮೇಲಿನಂತೆ.

ಡಿಬಿಒಡಿ. ಸಂಖ್ಯೆ. ಡಿಐಆರ್. ಬಿಸಿ. ೧೫೧/೧೩.೦೩.೦೦/೯೯–೨೦೦೦ ಮಾರ್ಚ್ ೨೩, ೨೦೦೦

**ಠೇವಣಿಗಳ ಮೇಲಿನ ಬಡ್ಡಿ ದರಗಳು**

ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, ೧೯೪೯ರ ೨೧ ಮತ್ತು ೩೫ಎ ಪ್ರಕರಣಗಳಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮತ್ತು ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ ತನ್ನ ಮಾರ್ಗದರ್ಶಕ ಸೂಚನೆ ಡಿಬಿಒಡಿ. ಸಂಖ್ಯೆ. ಡಿಐಆರ್.ಬಿಸಿ. ೧೫೧/ಸಿ.೩೪೭/೮೫, ದಿನಾಂಕ ಡಿಸೆಂಬರ್ ೨೭, ೧೯೮೫ನ್ನು ಭಾಗಶಃ ಮಾರ್ಪಾಡು ಮಾಡಿ ಭಾರತೀಯ ರಿಸರ್ವ್ ಬ್ಯಾಂಕು, ಸಾರ್ವಜನಿಕ ಹಿತದೃಷ್ಟಿಯಿಂದ ೧೧ನೇ ಪ್ಯಾರಾದ (ಬಿ) ಉಪಖಂಡವನ್ನು ತಿದ್ದುಪಡಿ ಮಾಡುವುದು ಅಗತ್ಯ ಮತ್ತು ವಿಹಿತವೆಂದು ಮನಗಂಡು ಸದರಿ ಉಪಖಂಡವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಈ ಮುಂದಿನಂತೆ ತಿದ್ದುಪಡಿ ಮಾಡತಕ್ಕದ್ದೆಂದು ಈ ಮೂಲಕ ನಿರ್ದೇಶಿಸುತ್ತದೆ.

" (ಬಿ) ಮೇಲಿನ (ಎ) ಉಪಖಂಡದಲ್ಲಿ (೧) ರಿಂದ (೩) ರಲ್ಲಿ ತಿಳಿಸಿರುವಂಥ ಸ್ವರೂಪದ್ದಲ್ಲದ ಸಾವಧಿ ಠೇವಣಿಯ ಮೇಲೆ ಸಾಲವನ್ನು ಮಂಜೂರು ಮಾಡಿದಾಗ

(೧) ಬ್ಯಾಂಕುಗಳು ಪ್ರಧಾನ ಬಡ್ಡಿ ದರವನ್ನು ಗಣನೆಗೆ ತೆಗೆದುಕೊಳ್ಳದೆ ಬಡ್ಡಿ ದರಗಳನ್ನು ವಿಧಿಸುವ ಸ್ವಾತಂತ್ರ್ಯವನ್ನು ಹೊಂದಿರತಕ್ಕದ್ದು, ಆದರೆ ಅಂಥ ಸಾಲದ ಮೊತ್ತ ೨ ಲಕ್ಷ ರೂಪಾಯಿಗಳವರೆಗಿರಬೇಕು.

(೨) ಸಾಲವು ೨ ಲಕ್ಷ ರೂಪಾಯಿಗಳನ್ನು ಮೀರಿದರೆ, ವಿಧಿಸತಕ್ಕ ಬಡ್ಡಿಯು ಕಾಲಕಾಲಕ್ಕೆ ನೀಡಿದ ಸಾಲಗಳ ಮೇಲಿನ ಬಡ್ಡಿ ದರಗಳಿಗೆ ಸಂಬಂಧಿಸಿದ ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗದರ್ಶಕ ಸೂಚನೆ ಅನ್ವಯ ಗೊತ್ತುಪಡಿಸಿದ ದರದಲ್ಲಿರತಕ್ಕದ್ದು.

ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ ಮಾರ್ಗದರ್ಶಕ ಸೂಚನೆ ಡಿಬಿಒಡಿ ಸಂಖ್ಯೆ ಡಿಐಆರ್. ಬಿಸಿ. ೧೫೧/ಸಿ. ೩೪೭/೮೫ ದಿನಾಂಕ ಡಿಸೆಂಬರ್ ೨೭, ೧೯೮೫ರ ಇತರ ಉಪಬಂಧಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

(ಜಿ.ಪಿ. ಮುನಿಯಪ್ಪನ್)
ಕಾರ್ಯನಿರ್ವಾಹಕ ನಿರ್ದೇಶಕ.

ಡಿಬಿಒಡಿ ಸಂಖ್ಯೆ. ಡಿಐಆರ್. ಬಿಸಿ. ೧೫೨/೧೩.೦೩.೦೦/೨೦೦೦ ಮಾರ್ಚ್ ೨೩, ೨೦೦೦

**ವಿದೇಶೀ ಕರೆನ್ಸಿ (ಅನಿವಾಸಿ) ಖಾತೆಗಳ (ಬ್ಯಾಂಕುಗಳು) ಯೋಜನೆ**

ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, ೧೯೪೯ರ ೨೧ ಮತ್ತು ೩೫ಎ ಪ್ರಕರಣಗಳಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಭಾರತೀಯ ರಿಸರ್ವ್ ಬ್ಯಾಂಕು, ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ ದಿನಾಂಕ ೨೯ ಏಪ್ರಿಲ್ ೧೯೯೩ರ ಬ್ಯಾಂಕ್ ನಿರ್ದೇಶಕ ಸೂತ್ರ ಡಿಬಿಒಡಿ. ಸಂಖ್ಯೆ.೧೧೫/೧೩.೦೩.೦೯/೯೩ರಲ್ಲಿ ಹಾಲಿ ಇರುವ (೩) ನೇ ಖಂಡದ (ಬಿ) ಉಪಖಂಡದ ಬದಲಿಗೆ ಈ ಮುಂದಿನ ಉಪ ಖಂಡವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಪ್ರತಿಸ್ಥಾಪಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅಗತ್ಯ ಮತ್ತು ವಿಹಿತವೆಂದು ಮನಗಂಡು, ಹಾಗೆ ಮಾಡುವಂತೆ ಈ ಮೂಲಕ ನಿರ್ದೇಶಿಸುತ್ತದೆ.

"(ಬಿ) ಮೇಲಿನ (ಎ) ಉಪಖಂಡದಲ್ಲಿ ತಿಳಿಸಿರುವ ಸ್ವರೂಪದ್ದಲ್ಲದ ಸಾವಧಿ ಠೇವಣಿಯ ಮೇಲೆ ಸಾಲವನ್ನು ಮಂಜೂರು ಮಾಡಿದಾಗ

(೧) ಬ್ಯಾಂಕುಗಳು ಪ್ರಧಾನ ಬಡ್ಡಿ ದರವನ್ನು ಗಣನೆಗೆ ತೆಗೆದುಕೊಳ್ಳದೆ ಬಡ್ಡಿ ದರಗಳನ್ನು ವಿಧಿಸುವ ಸ್ವಾತಂತ್ರ್ಯವನ್ನು ಹೊಂದಿರತಕ್ಕದ್ದು, ಆದರೆ ಅಂಥ ಸಾಲದ ಮೊತ್ತ ೨ ಲಕ್ಷ ರೂಪಾಯಿಗಳವರೆಗಿರಬೇಕು.

(೨) ಸಾಲವು ೨ ಲಕ್ಷ ರೂಪಾಯಿಗಳನ್ನು ಮೀರಿದರೆ, ವಿಧಿಸತಕ್ಕ ಬಡ್ಡಿಯು ಕಾಲಕಾಲಕ್ಕೆ ನೀಡಿದ ಸಾಲಗಳ ಮೇಲಿನ ಬಡ್ಡಿ ದರಗಳಿಗೆ ಸಂಬಂಧಿಸಿದ ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗದರ್ಶಕ ಸೂಚನೆಯ ಅನ್ವಯ ಗೊತ್ತುಪಡಿಸಿದ ದರದಲ್ಲಿರತಕ್ಕದ್ದು.

ಕಾಲಕಾಲಕ್ಕೆ ತಿದ್ದುಪಡಿಯಾದ --------- ಡಿಬಿಒಡಿ.ಸಂಖ್ಯೆ.ಬಿ.ಸಿ.೧೧೫/೧೩.೦೧.೦೯/೯೩ ದಿನಾಂಕ ೨೯ ಏಪ್ರಿಲ್ ೧೯೯೩ರ ಇತರ ಉಪಬಂಧಗಳಲ್ಲಿ ಯಾವುದೇ ಬದಲಾವಣೆ ಇಲ್ಲ.

(ಜಿ.ಪಿ. ಮುನಿಯಪ್ಪನ್)
ಕಾರ್ಯನಿರ್ವಾಹಕ ನಿರ್ದೇಶಕ.

ಸ್ಲಿಪ್–೧೦
(ಸೂಚನೆಗಳ ಕೈಪಿಡಿಯ ಅಧ್ಯಾಯ ೯,
ಡಿಬಿಒಡಿ, ಡಿಬಿಎಸ್.ಐಇಸಿಡಿ.ಡಿಐಆರ್. ಬಿಸಿ ೧೫೧/೨೦೦೦)

೯.ಗಿಖ.ಖ. (೨)

(ಬಿ) ಮೇಲಿನ (ಎ) ಉಪಖಂಡದಲ್ಲಿ (೧) ರಿಂದ (೩) ರಲ್ಲಿ ತಿಳಿಸಿರುವಂತಹ ಸ್ವರೂಪದ್ದಲ್ಲದ ಸಾವಧಿ ಠೇವಣಿಯ ಮೇಲೆ ಸಾಲವನ್ನು ಮಂಜೂರು ಮಾಡಿದಾಗ

(೧) ಬ್ಯಾಂಕುಗಳು ಪ್ರಧಾನ ಬಡ್ಡಿ ದರವನ್ನು ಗಣನೆಗೆ ತೆಗೆದುಕೊಳ್ಳದೆ ಬಡ್ಡಿ ದರಗಳನ್ನು ವಿಧಿಸುವ ಸ್ವಾತಂತ್ರ್ಯವನ್ನು ಹೊಂದಿರತಕ್ಕದ್ದು, ಆದರೆ ಅಂಥ ಸಾಲದ ಮೊತ್ತ ೨ ಲಕ್ಷ ರೂಪಾಯಿಗಳವರೆಗಿರಬೇಕು.

(೨) ಸಾಲವು ೨ ಲಕ್ಷ ರೂಪಾಯಿಗಳನ್ನು ಮೀರಿದರೆ, ವಿಧಿಸತಕ್ಕ ಬಡ್ಡಿಯು ಕಾಲಕಾಲಕ್ಕೆ ನೀಡಿದ ಸಾಲಗಳ ಮೇಲಿನ ಬಡ್ಡಿ ದರಗಳಿಗೆ ಸಂಬಂಧಿಸಿದ ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗದರ್ಶಕ ಸೂಚನೆ ಅನ್ವಯ ಗೊತ್ತುಪಡಿಸಿದ ದರದಲ್ಲಿರತಕ್ಕದ್ದು.

ಸ್ಲಿಪ್–೧೧
(ಸೂಚನೆಗಳ ಕೈಪಿಡಿಯ ಅಧ್ಯಾಯ ೯,
ಡಿಬಿಒಡಿ, ಡಿಬಿಎಸ್.ಐಇಸಿಡಿ.ಡಿಐಆರ್. ಬಿಸಿ ೧೫೧/೨೦೦೦)

೯.ಗಿಖ.೨. (೨) (ಬಿ)

(ಬಿ) ಮೇಲಿನ ಉಪಖಂಡದಲ್ಲಿ (i) ರಿಂದ (iii) ರಲ್ಲಿ ತಿಳಿಸಿರುವಂತಹ ಸ್ವರೂಪದ್ದಲ್ಲದ ಸಾವಧಿ ಠೇವಣಿಯ ಮೇಲೆ ಸಾಲವನ್ನು ಮಂಜೂರು ಮಾಡಿದಾಗ

(i) ಬ್ಯಾಂಕುಗಳು ಪ್ರಧಾನ ಬಡ್ಡಿ ದರವನ್ನು ಗಣನೆಗೆ ತೆಗೆದುಕೊಳ್ಳದೆ ಬಡ್ಡಿ ದರಗಳನ್ನು ವಿಧಿಸುವ ಸ್ವಾತಂತ್ರ್ಯವನ್ನು ಹೊಂದಿರತಕ್ಕದ್ದು, ಆದರೆ ಅಂಥ ಸಾಲದ ಮೊತ್ತ ೨ ಲಕ್ಷ ರೂಪಾಯಿಗಳವರೆಗಿರಬೇಕು.

(ii) ಸಾಲವು ೨ ಲಕ್ಷ ರೂಪಾಯಿಗಳನ್ನು ಮೀರಿದರೆ, ವಿಧಿಸತಕ್ಕ ಬಡ್ಡಿಯು ಕಾಲಕಾಲಕ್ಕೆ ನೀಡಿದ ಸಾಲಗಳ ಮೇಲಿನ ಬಡ್ಡಿ ದರಗಳಿಗೆ ಸಂಬಂಧಿಸಿದ ಭಾರತೀಯ ರಿಸರ್ವ್ ಬ್ಯಾಂಕಿನಮಾರ್ಗದರ್ಶಕ ಸೂಚನೆ ಅನ್ವಯ ಗೊತ್ತುಪಡಿಸಿದ ದರದಲ್ಲಿರತಕ್ಕದ್ದು.

ಸ್ಲಿಪ್–೧೨
(ಸೂಚನೆಗಳ ಕೈಪಿಡಿಯ ಅಧ್ಯಾಯ ೯,
ಡಿಬಿಒಡಿ, ಡಿಬಿಎಸ್.ಐಇಸಿಡಿ.ಡಿಐಆರ್. ಬಿಸಿ ೧೫೨/೨೦೦೦)

೯.೧೫.೨. (ii) (ಬಿ)

(ಬಿ) ಮೇಲಿನ (ಎ) ಉಪಖಂಡದಲ್ಲಿ (i) ರಿಂದ (iii) ರಲ್ಲಿ ತಿಳಿಸಿರುವಂತಹ ಸ್ವರೂಪದ್ದಲ್ಲದ ಸಾವಧಿ ಠೇವಣಿಯ ಮೇಲೆ ಸಾಲವನ್ನು ಮಂಜೂರು ಮಾಡಿದಾಗ

(i) ಬ್ಯಾಂಕುಗಳು ಪ್ರಧಾನ ಬಡ್ಡಿ ದರವನ್ನು ಗಣನೆಗೆ ತೆಗೆದುಕೊಳ್ಳದೆ ಬಡ್ಡಿ ದರಗಳನ್ನು ವಿಧಿಸುವ ಸ್ವಾತಂತ್ರ್ಯವನ್ನು ಹೊಂದಿರತಕ್ಕದ್ದು, ಆದರೆ ಅಂಥ ಸಾಲದ ಮೊತ್ತ ೨ ಲಕ್ಷ ರೂಪಾಯಿಗಳವರೆಗಿರಬೇಕು.

(ii) ಸಾಲವು ೨ ಲಕ್ಷ ರೂಪಾಯಿಗಳನ್ನು ಮೀರಿದರೆ, ವಿಧಿಸತಕ್ಕ ಬಡ್ಡಿಯು ಕಾಲಕಾಲಕ್ಕೆ ನೀಡಿದ ಸಾಲಗಳ ಮೇಲಿನ ಬಡ್ಡಿ ದರಗಳಿಗೆ ಸಂಬಂಧಿಸಿದ ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗದರ್ಶಕ ಸೂಚನೆ ಅನ್ವಯ ಗೊತ್ತುಪಡಿಸಿದ ದರದಲ್ಲಿರತಕ್ಕದ್ದು.